# ಮಹಿಳಾ ಕ್ರಿಕೆಟ್‌ನ ಕೋಲ್ಮಿಂಚು



■ ಪ್ರವೀಣ ಕುಲಕರ್ಣಿ

ಕಳೆದ ವಾರ ಬೆಂಗಳೂರು ಏರ್‌ಶೋ ಶುರುವಾಗುವ ಮುನ್ನ ತಲೆ ಎತ್ತರಿಸಿ ನೋಡುವಂತೆ ಮತ್ತೊಂದು ವಿದ್ಯಮಾನವೆಂದರೆ ಮಹಿಳೆಯರ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟ್ವೆಂಟಿ–20 ಕ್ರಿಕೆಟ್‌ನ ಬಿಡ್ ಪ್ರಕ್ರಿಯೆ. ಅದರಲ್ಲೂ ಹರಾಜು ಪ್ರಕ್ರಿಯೆಯಲ್ಲಿ ಸ್ಮೃತಿ ಮಂದಾನ ಅವರು 3.4 ಕೋಟಿ ರೂಪಾಯಿಗೆ ಬೆಂಗಳೂರಿನ ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ಪಾಲಾದುದು ಎಲ್ಲರ ಹುಬ್ಬು ಮೇಲೇರುವಂತೆ ಮಾಡಿತ್ತು. ಡಬ್ಲ್ಯುಪಿಎಲ್ ಹರಾಜಿನಲ್ಲಿ ಅತ್ಯಧಿಕ ಮೊತ್ತ ಪಡೆದ ಆಟಗಾರ್ತಿ ಎಂಬ ಹಿರಿಮೆಗೆ ಆಕೆ ಪಾತ್ರರಾದರು.

ಮುಂಬೈನ ಈ ಆರಂಭಿಕ ಆಟಗಾರ್ತಿ ಭಾರತೀಯ ಮಹಿಳಾ ರಾಷ್ಟ್ರೀಯ ತಂಡದ ಸದಸ್ಯೆಯೂ ಹೌದು. ಅಷ್ಟೇ ಅಲ್ಲ, ಉಪನಾಯಕಿ ಕೂಡ. ದೇಶಿ ಕ್ರಿಕೆಟ್‌ನಲ್ಲಿ ಮಹಾರಾಷ್ಟ್ರ ತಂಡದ ಪರ ಅವರು ಆಡುವರು. ಐಸಿಸಿ ಮತ್ತು ಬಿಸಿಸಿಐಯಿಂದ 'ವರ್ಷದ ಅತ್ಯುತ್ತಮ ಮಹಿಳಾ ಕ್ರಿಕೆಟರ್' ಪ್ರಶಸ್ತಿಯನ್ನೂ ಪಡೆದಿರುವ ಸ್ಮೃತಿ, ಮಾರ್ವಾರಿ ಕುಟುಂಬದ ಕುಡಿ. ಮಾರ್ವಾರಿ ಮನೆತನದವರೆಂದರೆ ಹಣಕಾಸಿನ ವ್ಯವಹಾರಗಳಿಗೆ ಹೆಸರಾದವರು. ಆದರೆ, ಈ ಹುಡುಗಿ ಮಾತ್ರ ರನ್ನಿನ ಲೆಕ್ಕಾಚಾರದಲ್ಲಿ ತೊಡಗಿಸಿಕೊಂಡರು.

ಸ್ಮೃತಿ ಹುಟ್ಟಿದ್ದು ಮುಂಬೈನಲ್ಲಿ, ಬೆಳೆದಿದ್ದು ಸಾಂಗ್ಲಿಯ ಉಪನಗರ ಮಾಧವನಗರದಲ್ಲಿ. ಅವರ ಸಹೋದರ ಶ್ರವಣ್ ಕೂಡ ಕ್ರಿಕೆಟ್ ಆಟಗಾರ. ಮಹಾರಾಷ್ಟ್ರದ ವಿವಿಧ ವಯೋಮಾನಗಳ ರಾಜ್ಯ ತಂಡಗಳಲ್ಲಿ ಆಡಿದವರು. ಹಾಗೆ ನೋಡಿದರೆ, ಕ್ರಿಕೆಟ್ ಆಡಲು ಸ್ಮೃತಿಗೆ ಅವರ ಸಹೋದರನೇ ಪ್ರೇರಣೆ. ಮಕ್ಕಳ ಭವಿಷ್ಯ ಮತ್ತು ವ್ಯವಹಾರದ ವಿಸ್ತರಣೆಯ ಉದ್ದೇಶದಿಂದ ಸ್ಮೃತಿ ಅವರ ತಂದೆ ಶ್ರೀನಿವಾಸ್ ತಮ್ಮ ಕುಟುಂಬವನ್ನು ಮಾಧವನಗರದಿಂದ ಮುಂಬೈಗೆ ಸ್ಥಳಾಂತರಿಸಿದರು. ಅಲ್ಲಿಯೇ ಈ ಹುಡುಗಿಗೆ ಕ್ರಿಕೆಟ್ ದೀಕ್ಷೆ ಮುಂದುವರಿಯಿತು. ನೆಟ್ಸ್‌ನಲ್ಲಿ ಗಂಟೆಗಟ್ಟಲೆ ಬೌಲಿಂಗ್ ಮಾಡುವ ಮೂಲಕ ಶ್ರವಣ್ ಕೂಡ ತಮ್ಮ ಸಹೋದರಿಗೆ ಪಾಠ ಮಾಡಿದರು. ಸ್ಮೃತಿ ಒಳ್ಳೆಯ ಬ್ಯಾಟ್ಸ್‌ವುಮನ್ ಆಗಿ ರೂಪುಗೊಳ್ಳುತ್ತಾ ಹೋದರು.

ಸ್ಮೃತಿಯ ಬೆಳವಣಿಗೆಗೆ ಪೂರಕವಾಗಿ ಅವರ ಕುಟುಂಬದ ಸದಸ್ಯರು ವಿವಿಧ ಜವಾಬ್ದಾರಿಗಳನ್ನು ಹಂಚಿಕೊಂಡರು. ಮಗಳ ಕ್ರಿಕೆಟ್ ಟೂರ್ನಿಗಳ ಮೇಲೆ ನಿಗಾ ಇಟ್ಟು, ಅದಕ್ಕೆ ತಕ್ಕಂತೆ ವ್ಯವಸ್ಥೆ ಮಾಡುವ ಹೊಣೆಯನ್ನು ತಂದೆ ಶ್ರೀನಿವಾಸ್ ಅವರು ಹೊತ್ತರೆ, ಅಮ್ಮ ಸ್ಮಿತಾ ಅವರು ಮಗಳ ಡಯಟ್‌ನ ವ್ಯವಸ್ಥೆಯನ್ನು ಮುತುವರ್ಜಿಯಿಂದ ಮಾಡಿದರು. ಸಹೋದರ ಶ್ರವಣ್, ನೆಟ್ಸ್‌ನಲ್ಲಿ ಅಭ್ಯಾಸ ಮಾಡಿಸುವ ಹೊಣೆ ಹೊತ್ತರು. ಹೀಗೆ ಮನೆಯ ಮುದ್ದಿನ ಮಗಳು ಕ್ರಿಕೆಟ್ ಆಟಗಾರ್ತಿಯಾಗಿ ಬೆಳೆದಳು.

ಹಲವು ಐತಿಹಾಸಿಕ ಸಾಧನೆಗಳನ್ನು ಮಾಡಿರುವ ಸ್ಮೃತಿ, ಭಾರತೀಯ ಮಹಿಳಾ ಕ್ರಿಕೆಟ್‌ನ ಹೆಮ್ಮೆಯ ತಾರೆ. ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ಮೊದಲ ಭಾರತೀಯ ಬ್ಯಾಟ್ಸ್‌ವುಮನ್ ಎಂಬ ಹಿರಿಮೆಗೆ ಪಾತ್ರರಾದವರೂ ಅವರು. ವುಮೆನ್ಸ್ ಚಾಲೆಂಜರ್ಸ್ ಟ್ರೋಫಿಯಲ್ಲೂ ಅವರ ಸಾಧನೆ ಬೆರಗು ಮೂಡಿಸುವಂತಿತ್ತು. ಸತತ ಮೂರು ಅರ್ಧಶತಕ ದಾಖಲಿಸಿ, ತಾವು ಪ್ರತಿನಿಧಿಸುತ್ತಿದ್ದ ರೆಡ್ ಇಂಡಿಯಾ ತಂಡ ಟ್ರೋಫಿ ಗೆಲ್ಲಲು ಕಾರಣವಾದವರು ಅವರು. ಟೆಸ್ಟ್, ಏಕದಿನ ಮತ್ತು ಟ್ವೆಂಟಿ–20 ಮೂರೂ ವಿಧದ ಕ್ರಿಕೆಟ್‌ನಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಸ್ಮೃತಿ. 2017ರ ಮಹಿಳಾ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡ ಫೈನಲ್ ತಲುಪುವಲ್ಲಿ ಸ್ಮೃತಿ ಅವರು ವಹಿಸಿದ ಪಾತ್ರ ಮಹತ್ವದ್ದಾಗಿತ್ತು. ಭಾರತದ ಟ್ವೆಂಟಿ–20 ಕ್ರಿಕೆಟ್ ತಂಡವನ್ನು ಮುನ್ನಡೆಸಿದ ಅನುಭವವನ್ನೂ ಹೊಂದಿರುವ ಅವರು, ಆ ಹೊಣೆ ನಿಭಾಯಿಸಿದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ಕಿರೀಟವನ್ನೂ ತೊಟ್ಟವರು.

ಬಿಡ್ ಪ್ರಕ್ರಿಯೆಯಲ್ಲಿ ಸ್ಮೃತಿ ಅವರಿಗೆ ಹೆಚ್ಚಿನ ಮೊತ್ತ ಸಿಕ್ಕಿರುವುದು ಮಹಿಳಾ ಕ್ರಿಕೆಟಿಗರೂ ಆರ್ಥಿಕವಾಗಿ ಸದೃಢವಾಗುತ್ತಿರುವ ಲಕ್ಷಣ. ಐಪಿಎಲ್‌ಗೆ ಹೋಲಿಸಿದರೆ ಇದು ದೊಡ್ಡ ಮೊತ್ತವಲ್ಲವಾದರೂ ಹೊಸ ಭರವಸೆಯನ್ನಂತೂ ಮೂಡಿಸಿದೆ. ಮಹಿಳಾ ಕ್ರಿಕೆಟ್ ಕುರಿತು ವ್ಯಕ್ತವಾಗುತ್ತಿದ್ದ ಉಡಾಫೆಯ ಮನೋಭಾವ ದೂರವಾಗಲೂ ಸ್ಮೃತಿ ಅವರಂತಹ ಆಟಗಾರ್ತಿಯರ ಸಾಧನೆ ನೆರವಿಗೆ ಬರುತ್ತಿದೆ. ಡಬ್ಲ್ಯುಪಿಎಲ್ ಸಹ ಐಪಿಎಲ್‌ನಂತೆ ಸದ್ದು ಮಾಡುವ ದಿನಗಳು ದೂರವಿಲ್ಲ ಎಂಬ ಆಶಾವಾದವೂ ವ್ಯಕ್ತವಾಗಿದೆ. ಹ್ಯಾಟ್ಸ್ ಅಪ್ ಟು ಸ್ಮೃತಿ! ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65